Deposition Sheets (RP.No.57) Form No.4

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1/2024**

ಪಿಡ್ಬ್ಲೂಃ 1 ಸಿಡ್ಲ್ಯೂಃ 1

ಸಾಕ್ಷಿದಾರನ ಹೆಸರು ಃ ಪ್ರದೀಪ್
ತಂದೆಯ ಹೆಸರು ಃ ಮಂಜುನಾಥ್ ಮೂಲ್ಯ
ಪ್ರಾಯ ಃ 34 ವರ್ಷ
ಉದ್ಯೋಗ ಃ ಚಾಲಕ
ವಾಸ ಃ ಕಡಾರಿ, ಬಜಗೋಳಿ

ದಿನಾಂಕ 27.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿತರನ್ನು ನೋಡಿ ಗುರುತಿಸಿದ್ದೇನೆ. 2 ನೇ ಆರೋಪಿ ನನ್ನ ತಮ್ಮ.

ಚಾಸಾ-2 ನನ್ನ ತಾಯಿ, ಚಾಸಾ-3 ನನ್ನ ಹೆಂಡತಿ, ಚಾಸಾ-4 ಮತ್ತು 5 ರವರ ಪರಿಚಯ ಇದೆ. ಚಾಸಾ-4 ರವರು 1 ನೇ ಆರೋಪಿಯ ಸಂಬಂಧಿಕ.

ನಾನು ಚಾಸಾ-2 ಮತ್ತು 3 ರವರ ಜೊತೆ ನಮ್ಮ ಮನೆಯಲ್ಲಿ ವಾಸವಾಗಿದ್ದೇನೆ. ನಾನು 1 ನೇ ಆರೋಪಿಯ ಅಡಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. ಚಾಸಾ-4 ರವರಿಗೆ 1 ನೇ ಆರೋಪಿ ನನ್ನ ಹೆಸರಿನಲ್ಲಿ 1 ನೇ ಆರೋಪಿ ನನ್ನ ಹೆಸರಿನಲ್ಲಿ ಡಿಯೊ ದ್ವಿ ಚಕ್ರ ವಾಹನವನ್ನು ಸಾಲದ ಮುಖಾಂತರ ಖರೀದಿ ಮಾಡಿ ಕೊಡಿಸಿರುತ್ತಾರೆ. ವಾಹನದ ದಾಖಲೆಗಳು ನನ್ನ ಹೆಸರಿನಲ್ಲಿ ಇದೆ. ಸಾಲದ ಕಂತನ್ನು ಚಾಸಾ-4 ರವರು ಪಾವತಿಸುತ್ತಿದ್ದರು. ಸದ್ರಿ ಸಾಲದ ಕಂತನ್ನು ಪಾವತಿಸದೆ ಬಾಕಿ ಇತ್ತು. ಆ ಕಾರಣ ಬ್ಯಾಂಕ್ ನ ಸಿಬ್ಬಂದಿಗಳು ನನಗೆ ಫೋನ್ ಮಾಡುತ್ತಿದ್ದರು.

ಸದ್ರಿ ವಿಚಾರವನ್ನು ನಾನು **1** ನೇ ಆರೋಪಿಗೆ ತಿಳಿಸಿದೆ. ದಿ:**30.09.2023** ರಂದು ರಾತ್ರಿ **10.30** ಗಂಟೆಗೆ **1** ಮತ್ತು **2** ನೇ ಆರೋಪಿ ನಮ್ಮ ಮನೆಗೆ ರಿಡ್ಜ್ ಕಾರಿನಲ್ಲಿ ಬಂದಿರುತ್ತಾರೆ. ನಾನು ಮಲಗಲು ಹೋಗುತ್ತಿದ್ದೆ. ಆಗ **1** ಮತ್ತು **2** ನೇ ಆರೋಪಿ ಸಾಲದ ಕಂತನ್ನು ಕಟ್ಟುವುದಿಲ್ಲ ನೀನು ಏನು ಬೇಕಾದರೂ ಮಾಡಿಕೊ ಬೆವರ್ಸಿ ರಂಡೆ ಮಗ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತಾರೆ. ಆ ನಂತರ ಆರೋಪಿಗಳು ನನಗೆ ಹೊಡೆಯಲು ಬಂದಾಗ ನನ್ನ ತಾಯಿ ಚಾಸಾ-**2** ರವರು ಅಡ್ಡ ಬಂದಿರುತ್ತಾರೆ. ಆಗ ನನ್ನ ತಾಯಿಯನ್ನು ಆರೋಪಿಗಳು ದೂಡಿರುತ್ತಾರೆ. ಆಗ ನನ್ನ ಹೆಂಡತಿ ನನ್ನ ತಾಯಿಯ ಹಿಂದೆ ಇದ್ದರು. ದೂಡಿದ ಪರಿಣಾಮ ನನ್ನ ತಾಯಿ ಮತ್ತು ಹೆಂಡತಿ ಕೆಳಗೆ ಬಿದ್ದಿರುತ್ತಾರೆ. ಆಗ ಚಾಸಾ-**3** ರವರು ಗಲಾಟೆ ಮಾಡಬೇಡಿ ಎಂದು ಹೇಳಿದಳು. ಆಸಮಯದಲ್ಲಿ **2** ನೇ ಆರೋಪಿ ಕಾರಿನಿಂದ ಸ್ಟೀಲಿನ ಲಿವರ್ ತಂದು ನನ್ನ ಮನೆಯ ಕಿಟಕಿಯ ಗಾಜನ್ನು ಒಡೆದು ಹಾಕಿದನು. **2** ನೇ ಆರೋಪಿ ನನ್ನ ಹೆಂಡತಿಗೆ ಬೆವರ್ಸಿ ರಂಡೆ ನಿನ್ನನ್ನು ಸಾಯಿಸುತ್ತೇನೆ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾನೆ.

**2** ನೇ ಆರೋಪಿ ನನ್ನ ಮೊಬೈಲ್ ನ್ನು ಕಸಿದುಕೊಂಡು ಕೆಳಗೆ ಬಿಸಾಡಿ ಪುಡಿಪುಡಿ ಮಾಡಿರುತ್ತಾನೆ. ಅದಾದ ನಂತರ ಸ್ಟೀಲಿನ ಲಿವರ್ ನ್ನು ತೋಟದ ಕಡೆ ಬಿಸಾಡಿ ನಾಳೆ ಸಂಜೆಯೊಳಗೆ ನಮ್ಮನ್ನು ಸಾಯಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿ ಕಾರಿನಿಂದ ಹೊರಟು ಹೋಗಿರುತ್ತಾರೆ. ನಂತರ ನಾನು ಪೊಲೀಸರಿಗೆ ಫೋನ್ ಬರಮಾಡಿಕೊಂಡಿರುತ್ತೇನೆ. ನಾನು ನನ್ನ ಮನೆಯಲ್ಲಿ ಆರೋಪಿಗಳ ವಿರುದ್ಧ ದೂರನ್ನು ಪೊಲೀಸರಿಗೆ ನೀಡಿರುತ್ತೇನೆ. ಈಗ ನಾನು ನೋಡಿದ ದೂರಿನಲ್ಲಿ ನನ್ನ ಸಹಿ ಇದೆ. ಸದ್ರಿ ದೂರನ್ನು ನಿಪಿ-**1** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು. ಪೊಲೀಸರು ನಾಳೆ ಮತ್ತೆ ಬರುತ್ತೇವೆ ಎಂದು ಹೇಳಿರುತ್ತಾರೆ.

ದಿ:**01.10.2023** ರಂದು ನಮ್ಮ ಮನೆಗೆ ಪೊಲೀಸರು ಬಂದಿರುತ್ತಾರೆ. ನಾನು ಘಟನಾ ಸ್ಥಳವನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಪೊಲೀಸರು ನನ್ನ ಹಾಗೂ ಚಾಸಾ-**6** ಮತ್ತು **7** ರವರ ಸಮಕ್ಷಮದಲ್ಲಿ ಸ್ಥಳ ಮಹಜರನ್ನು ಸಂಜೆ **4.00** ರಿಂದ **6.00** ಗಂಟೆಯವರೆಗೆ ಮಾಡಿರುತ್ತಾರೆ. ಮಹಜರು ಮಾಡಿ ಸ್ಟೀಲಿನ ಲಿವರ್ , ತಾಯಿಯ ನೀಲಿ ಮತ್ತು ಕೆಂಪು

ಬಣ್ಣದ ಗಾಜಿನ ಬಳೆಯ ಚೂರು ಮತ್ತು ನನ್ನ ಮೊಬೈಲ್, ಕಿಟಕಿಯ ಬಾಗಿಲಿನ ಗಾಜಿನ ಚೂರು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಈಗ ನಾನು ನೋಡಿದ ಮಹಜರಿನಲ್ಲಿ ನನ್ನ ಸಹಿ ಇದೆ. ಸದ್ರಿ ತಕ್ಷೀರು ಸ್ಥಳ ಮಹಜರನ್ನು ನಿಪಿ-**2** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು. ತಕ್ಷೀರು ಮಹಜರು ಮಾಡುವ ವೇಳೆಯಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಈಗ ನಾನು ನೋಡಿದ **6** ಭಾವಚಿತ್ರಗಳು ತಕ್ಷೀರು ಮಹಜರು ವೇಳೆ ತೆಗೆದಿರುತ್ತಾರೆ. ಸದ್ರಿ **6** ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-**3** ಎಂದು ಗುರುತಿಸಲಾಯಿತು. ಆರೋಪಿಗಳು ಬಂದ ಕಾರಿನ ಭಾವಚಿತ್ರ ನೋಡಿ ಗುರುತಿಸಿದ್ದೇನೆ. ಕಾರಿನ **4** ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-**4** ಎಂದು ಗುರುತಿಸಲಾಯಿತು. ಮಹಜರು ವೇಳೆ ವಶಪಡಿಸಿಕೊಂಡ ಸ್ಟೀಲಿನ ಲಿವರ್ , ಕಿಟಕಿ ಗಾಜಿನ ಚೂರು, ಚಾಸಾ-**2** ರವರ ನೀಲಿ ಮತ್ತು ಕೆಂಪು ಬಣ್ಣದ ಬಳೆಯ ಚೂರು, ನನ್ನ ಮೊಬೈಲ್ ನೋಡಿ ಗುರುತಿಸಿದ್ದೇನೆ. ಸದ್ರಿ ಸ್ವತ್ತುಗಳನ್ನು ಮು ಮಾ-**1** ರಿಂದ **3** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀಮತಿ ಐ ಎಸ್ ಕೆ ವಕೀಲರಿಂದಃ

ಈಗ ನಾನು ಸುಹೇಲ್ ಎಂಬುವವರ ಲಾರಿಯ ಚಾಲಕನಾಗಿದ್ದೇನೆ. ಸುಹೇಲ್ ಮತ್ತು 1 ನೇ ಆರೋಪಿಗೆ ವೈ ಮನಸ್ಸು ಇದೆ ಎಂದರೆ ಸರಿ. 1 ನೇ ಆರೋಪಿಯ ಮಾಲಿಕತ್ವದ ಲಾರಿ ಚಾಲಕನಾಗಿ 2014 ರಿಂದ 2020 ರವರೆಗೆ ಕೆಲಸ ಮಾಡಿಕೊಂಡಿದ್ದೆ. ನಾನು ಅವರೊಟ್ಟಿಗೆ ಕೆಲಸ ಮಾಡುವ ಸಮಯದಲ್ಲಿ 1 ನೇ ಆರೋಪಿಯ ಹೆಂಡತಿ ಮತ್ತು ಆತ ನಮ್ಮ ಮನೆಗೆ ಬಂದು ರಾತ್ರಿ ವಾಸ ಮಾಡಿಕೊಂಡಿದ್ದರು. ಅದೇ ರೀತಿ ನಾನು ಮತ್ತು ನನ್ನ ತಾಯಿಯಾದ ಚಾಸಾ-2 ರವರು 1 ನೇ ಆರೋಪಿಯ ಮನೆಗೆ ಹೋಗಿ ಬರುತ್ತಿದ್ದೇವು. 2021 ನೇ ಇಸವಿಯಲ್ಲಿ ಕೋವಿಡ್ ಸಮಯದಲ್ಲಿ 1 ನೇ ಆರೋಪಿ ಮತ್ತು ಆತನ ಹೆಂಡತಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರು ಮತ್ತು ಒಂದೆರಡು ದಿನ ವಾಸ ಮಾಡಿದ್ದರು.

2022 ರಲ್ಲಿ ನಾನು 1 ನೇ ಆರೋಪಿಯ ಬಳಿಯಿಂದ ಕೆಲಸ ಬಿಟ್ಟಿರುತ್ತೇನೆ. ನಾನು ಕೆಲಸ ಬಿಡುವಾಗ ನನಗೂ ಹಾಗೂ 1 ನೇ ಆರೋಪಿಗೂ ಯಾವುದೇ ವೈ ಮನಸ್ಸು ಇರಲಿಲ್ಲ.

ನಾನು ಕೆಲಸ ಬಿಟ್ಟ ನಂತರ ನನ್ನ ತಮ್ಮನಾದ 2 ನೇ ಆರೋಪಿ 1 ನೇ ಆರೋಪಿಯ ಅಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ.

ಚಾಸಾ-4 ರವರಿಗೆ 1 ನೇ ಆರೋಪಿ ನನ್ನ ಹೆಸರಿನಲ್ಲಿ ತೆಗೆದುಕೊಟ್ಟಿರುವ ಸ್ಕೂಟರ್ ನಂಬರ್ ಗೊತ್ತಿರುವುದಿಲ್ಲ. ನಾನು ಶ್ರೀರಾಮ್ ಫೈನಾನ್ಸ್ ನಿಂದ 2019 ರಲ್ಲಿ ಸಾಲವನ್ನು ತೆಗೆದುಕೊಟ್ಟಿರುತ್ತೇನೆ. ಆ ಸ್ಕೂಟರಿನ ಮೌಲ್ಯ ರೂ.1,20,000/- ಆಗಿತ್ತು. ಚಾಸಾ-4 ರವರು ರೂ.20,000/- ಮೊತ್ತವನ್ನು ಸ್ಕೂಟರ್ ಖರೀದಿಸಲು ನೀಡಿರುತ್ತಾರೆ ಮತ್ತು ರೂ.95,000/- ಶ್ರೀರಾಮ್ ಫೈನಾನ್ಸ್ ನಿಂದ ಸಾಲವನ್ನು ಪಡೆದಿರುತ್ತೇನೆ. ಸಾಲ ಪಡೆಯುವಾಗ ಜಾಮೀನುದಾರನಾಗಿ 1 ನೇ ಆರೋಪಿಯಾಗಿದ್ದರು. ಸದ್ರಿ ಸಾಲವನ್ನು 3 ವರ್ಷದ ಒಳಗೆ ಕಂತನ್ನು ಕಟ್ಟಿ ತೀರಿಸಬೇಕಿತ್ತು. ತಿಂಗಳಿಗೆ ರೂ.3000/- ಕಂತು ಕಟ್ಟಬೇಕಿತ್ತು. ಬ್ಯಾಂಕ್ ಸಿಬ್ಬಂದಿಗಳು ಸದ್ರಿ ಸಾಲದ ಕಂತುಗಳು ಬಾಕಿ ಇರುವ 2022 ರಲ್ಲಿ ತಿಳಿಸಿರುತ್ತಾರೆ. ತಿಂಗಳು ನೆನಪಿಲ್ಲ. ಆ ಸಮಯದಲ್ಲಿ 8 ಕಂತುಗಳು ಬಾಕಿ ಇರುವ ಬಗ್ಗೆ ತಿಳಿಸಿರುತ್ತಾರೆ. ಸಾಲದ ಕರಾರಿನ ಪ್ರಕಾರ ಒಬ್ಬ ವ್ಯಕ್ತಿ 3 ಕಂತುಗಳನ್ನು ಪಾವತಿಸದಿದ್ದರೆ ಬ್ಯಾಂಕ್ ನವರು ನೋಟಿಸನ್ನು ಕೂಡಲೇ ನೀಡುತ್ತಾರೆ. ನನಗೆ 2021 ರಲ್ಲಿ ಬ್ಯಾಂಕ್ ನಿಂದ ನೋಟಿಸು ಬಂದಿರುತ್ತದೆ. ಆ ಸಮಯದಲ್ಲಿ ರೂ.12,000/- ಬಾಕಿ ಇರುವ ಬಗ್ಗೆ ತಿಳಿಸಿರುತ್ತಾರೆ. ನಾನು ಸದ್ರಿ ನೋಟಿಸಿನ ಬಗ್ಗೆ 1 ನೇ ಆರೋಪಿಗೆ ಹೇಳಿದ್ದೆ. ಸಾಲದ ಬಾಕಿ ಹಣವನ್ನು ಚಾಸಾ-4 ರವರು ಪಾವತಿಸಿರುತ್ತಾರೆ. ಆ ನಂತರ 2021 ರಲ್ಲಿ ಪುನಃ ನೋಟಿಸು ಬಂದಿರುತ್ತದೆ. ಸದ್ರಿ ನೋಟಿಸಿನ ಬಗ್ಗೆ 1 ನೇ ಆರೋಪಿಗೆ ತಿಳಿಸಿರುತ್ತೇನೆ. ಚಾಸಾ-4 ರವರು ಬಾಕಿ ಹಣವನ್ನು ಪಾವತಿಸಿರುತ್ತಾರೆ.

ಆ ನಂತರ ಪುನಃ 2022 ರಲ್ಲಿ ನೋಟಿಸು ಬಂದಿರುತ್ತದೆ. ಆ ನೋಟಿಸಿನ ರೂ.9000/- ಬಾಕಿ ಇರುವ ಬಗ್ಗೆ ನಮೂದಾರಗಿರುತ್ತದೆ. ಸದ್ರಿ ನೋಟಿಸಿನ ಬಗ್ಗೆ 1 ನೇ ಆರೋಪಿಗೆ ತಿಳಿಸಿರುತ್ತೇನೆ. ಆದರೆ ಬಾಕಿ ಮೊತ್ತವನ್ನು ಪಾವತಿಸಿರುವುದಿಲ್ಲ. 2022 ರಲ್ಲಿ ಬಾಕಿ ಇರುವ ಮೊತ್ತವನ್ನು ಚಾಸಾ-4 ರವರು ಪಾವತಿಸಿರುವುದಿಲ್ಲ. ಸಮಾನ್ಯವಾಗಿ ಶ್ರೀರಾಮ್ ಫೈನಾನ್ಸ್ ನವರು 3 ಕಂತುಗಳನ್ನು ಪಾವತಿಸದಿದ್ದಾಗ ವಾಹನವನ್ನು ಜಪ್ತಿ ಮಾಡುತ್ತಾರೆ ಎಂದರೆ ಸರಿ. ಇಲ್ಲಿಯವರೆಗೂ ಶ್ರೀರಾಮ್ ಫೈನಾನ್ಸ್ ನವರು ವಾಹನವನ್ನು ಜಪ್ತಿ ಮಾಡಿರುವುದಿಲ್ಲ.

ಆದಾದ ನಂತರ ಆಗಸ್ಟ್ 2023 ರಲ್ಲಿ ನನಗೆ ನೋಟಿಸು ಬಂದಿರುತ್ತದೆ. ಆ ಸಮಯದಲ್ಲಿ ಸದ್ರಿ ನೋಟಿಸಿನಲ್ಲಿ ರೂ.9000/- ಬಾಕಿ ಇರುವ ಬಗ್ಗೆ ಕಾಣಿಸಿರುತ್ತಾರೆ. ರೂ.9000/- ಬಾಕಿ ಇದೆ ಎಂದು ಕಾಣಿಸಿದ ಕಾರಣ 2022 ರಲ್ಲಿ ಬಾಕಿಯಾಗಿದ್ದ ಮೊತ್ತವನ್ನು ಪಾವತಿ ಮಾಡಲಾಗಿದೆ ಎಂದರೆ ಸರಿ. ಆಗಸ್ಟ್ 2023 ರಲ್ಲಿ ರೂ.9000/- ಕಾಣಿಸಿದ್ದರಿಂದ 3 ತಿಂಗಳ ಅಂದರೆ ಮೇ ಯಿಂದ ಜುಲೈಯವರೆಗೆ ಕಂತು ಬಾಕಿ ಇದೆ ಎಂದರೆ ಸರಿ. ಆಗಸ್ಟ್ 2023 ರ ನಂತರ ಯಾವುದೆ ನೋಟಿಸು ಬಂದಿರುವುದಿಲ್ಲ. ಸಾಕ್ಷಿ ಮುಂದುವರಿದು ಫೋನ್ ಕರೆ ಬರುತ್ತಿತ್ತು ಎಂದು ನುಡಿಯುತ್ತಾರೆ. ನಾನು ಆಗಸ್ಟ್ ತಿಂಗಳಲ್ಲಿ ಶ್ರೀರಾಮ್ ಫೈನಾನ್ಸ್ ಗೆ ಹೋದಾಗ ಅಲ್ಲಿ ಬಾಕಿ ಇದ್ದ ಮೊತ್ತ ಕೇವಲ ರೂ.9000/- ಆಗಿತ್ತು. 2019 ರಿಂದ 2023 ರವರೆಗೆ ಕಂತು ಕಟ್ಟಿದವರಿಗೆ ರೂ.9000/- ಮೊತ್ತ ಪಾವತಿಸಲು ಕಷ್ಟ ಇರಲಿಲ್ಲ ಎಂದರೆ ಸರಿ.

ಈಗ ಸದ್ರಿ ಸ್ಕೂಟರಿಗೆ ಸಾಲ ಇರುವುದಿಲ್ಲ. ಅದರ ಬಗ್ಗೆ ನಾನು ಡಿಸೆಂಬರ್ 2023 ರಲ್ಲಿ ತಿಳಿದುಕೊಂಡಿದ್ದೇನೆ. ನಾನು ಬ್ಯಾಂಕ್ ಗೆ ಹೋಗಿ NOC ಪಡೆದುಕೊಂಡಿರುತ್ತೇನೆ. ಸದ್ರಿ NOC ಮತ್ತು ಮೋಟಾರು ವಾಹನ ಕಾಯಿದೆಯ ನಮೂನೆ-29 ಮತ್ತು 30 ನೀಡಿದರೆ ಮಾತ್ರ ಸದ್ರಿ ವಾಹನ ಸಾಲ ಪಾವತಿ ಮಾಡಿದವರಿಗೆ ರವಾನೆ ಆಗುತ್ತದೆ ಎಂದರೆ ಸರಿ. ಇಲ್ಲಿಯವರೆಗೆ ಸದ್ರಿ ಸ್ಕೂಟರ್ ನನ್ನ ಹೆಸರಿನಲ್ಲಿ ಇದೆ. ಇಲ್ಲಿಯವರೆಗೂ NOC ಮತ್ತು ಮೋಟಾರು ವಾಹನ ಕಾಯಿದೆಯ ನಮೂನೆ-29 ಮತ್ತು 30 ಬಾಸಾ-4 ರವರಿಗೆ ನೀಡಿರುವುದಿಲ್ಲ. ಬಾಸಾ-4 ರವರು ನನಗೆ ರೂ.14000/- ಕೊಡಲು ಬಾಕಿ ಇರುವ ಕಾರಣ ನಾನು ಸದ್ರಿ NOC ಮತ್ತು ಮೋಟಾರು ವಾಹನ ಕಾಯಿದೆಯ ನಮೂನೆ-29 ಮತ್ತು 30 ನೀಡಿರುವುದಿಲ್ಲ. ನನ್ನ ಖಾತೆಯಿಂದ ರೂ.14000/- ಸಾಲಕ್ಕೆ ಕಡಿತವಾದ ಕಾರಣ ನಾನು ಸದ್ರಿ ಮೊತ್ತವನ್ನು ಕೇಳುತ್ತಿದ್ದೇನೆ. ಅದನ್ನು ನನಗೆ ಪಾವತಿಸಿದರೆ ನಾನು ಸದ್ರಿ NOC ಮತ್ತು ಮೋಟಾರು ವಾಹನ ಕಾಯಿದೆಯ ನಮೂನೆ-29 ಮತ್ತು 30 ನ್ನು ನೀಡಲು ಯಾವುದೇ ತಕರಾರು ಇಲ್ಲ.

ನನಗೆ ಮತ್ತು ಬಾಸಾ-4 ರವರು 2017-18 ರಿಂದ ಪರಿಚಯ. 2017-18 ರಲ್ಲಿ ಬಾಸಾ-4 ರವರಿಗೆ 15 ವರ್ಷ ಪ್ರಾಯವಾಗಿತ್ತು. ನನ್ನ ಲೆಕ್ಕದಲ್ಲಿ 2023 ರಲ್ಲಿ ಬಾಸಾ-4 ರವರ ಪ್ರಾಯ 21-22 ವರ್ಷ ಆಗಿರಬಹುದು. 2019 ರಲ್ಲಿ ಬಾಸಾ-4 ರವರು ಅಪ್ರಾಪ್ತ

ವಯಸ್ಕರಾಗಿದ್ದರು ಮತ್ತು ಆತನಿಗೆಂದೆ ಸ್ಕೂಟರ್ ನ್ನು ಖರೀದಿಸಿ ಕೊಡಿಸಲಾಗಿತ್ತು ಎಂದರೆ 1 ನೇ ಆರೋಪಿ ಹೇಳಿದ್ದಕ್ಕೆ ಕೊಟ್ಟಿರುತ್ತೇನೆ. ಅಪ್ರಾಪ್ತ ವಯಸ್ಕರಿಗೆ ವಾಹನ ಚಲಾಯಿಸುವಂತಿಲ್ಲ ಎಂಬ ಕಾನೂನಿನ ಬಗ್ಗೆ ಅರಿವು ಇದೆ ಮತ್ತು ಹಾಗೇ ಚಲಾಯಿಸಿದ್ದಲ್ಲಿ ವಾಹನದ ಮಾಲೀಕನಿಗೆ ಶಿಕ್ಷೆ ಆಗುತ್ತದೆ ಎಂದು ತಿಳಿದಿದೆ. ನಾನು ಚಾಸಾ-4 ರವರಿಗೆ ವಾಹನ ತೆಗೆದು ಕೊಡುವುದಿಲ್ಲ ಎಂದು 1 ನೇ ಆರೋಪಿಗೆ ಹೇಳಿರುತ್ತೇನೆ. ಹಾಗೇ ಹೇಳಿದರೂ ಸಹ ನಾನೇ ಬಾಧ್ಯಸ್ಥ ಎಂದು ತಿಳಿದಿರುತ್ತೇನೆ. ಚಾಸಾ-4 ರವರಿಗೆ 2023 ರಲ್ಲಿ 17 ವರ್ಷ ಎಂದರೆ ಇರಬಹುದು. ಚಾಸಾ-4 ರವರು ಅಪ್ರಾಪ್ತ ವಯಸ್ಕರಾದ ಕಾರಣ ಅವರಿಗೆ ಯಾವುದೇ ಕೆಲಸ ಮತ್ತು ಆದಾಯ ಇಲ್ಲದ ಕಾರಣ ಆತನು ಸಾಲದ ಕಂತನ್ನು ಪಾವತಿಸಿರುವುದಿಲ್ಲ ಎಂದರೆ ಸರಿ.

ನಾನು 1 ನೇ ಆರೋಪಿಯ ಲಾರಿಯ ಚಾಲಕನಾಗಿ ಕೆಲಸ ಮಾಡುತ್ತಿದ್ದಾಗ ಸದ್ರಿ ಲಾರಿಯ ಮಾಲಕ 1 ನೇ ಆರೋಪಿ ಆಗಿದ್ದರು. ನಾನು ಕೆಲಸ ಬಿಡುವಾಗ ಸದ್ರಿ ಲಾರಿಯ ಅಂದಾಜು ಮೌಲ್ಯ ಹತ್ತು ಲಕ್ಷ ಎಂದರೆ ಸರಿ. ಹತ್ತು ಲಕ್ಷ ಮೌಲ್ಯದ ಲಾರಿಯನ್ನು ಖರಿದಿಸಿದ 1 ನೇ ಆರೋಪಿಗೆ ಒಂದು ಲಕ್ಷ ಹಣವನ್ನು ಪಾವತಿಸಿ ಸ್ಕೂಟರನ್ನು ಖರೀದಿಸಲು ಸಾಮರ್ಥ್ಯ ಇದೆ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಸಮಯಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ